ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲ್ಯೂ- | 04 |
| ಪಿಡಬ್ಲ್ಯೂ- | 01 |

ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ- 18-09-2017 ರಂದು ತಹಶೀಲ್ದಾರ ಕೊಪ್ಪಳ ಇವರಿಗೆ ಪಹಣಿ ಸರಿ ಮಾಡಿಕೊಡಲು ಕೇಳಿ ಅರ್ಜಿ ಪ್ರತಿ ನಿಪಿ 2 ಎಂದು ಗುರುತಿಸಲಾಯಿತು. ದಿಃ- 25-02-2020 ರಂದು ತಹಶೀಲ್ದಾರ ಕೊಪ್ಪಳ ಇವರು ಮಾಡಿದ ಆದೇಶದ ಪ್ರತಿ ನಿಪಿ 3 ಎಂದು ಗುರುತಿಸಲಾಯಿತು. ದಿಃ- 14-01-2019 ರಂದು ತಹೇಶಿಲ್ದಾರ ಕೊಟ್ಟ ಹಿಂಬರಹ ಪ್ರತಿ ನಿಪಿ 4 ಎಂದು ಗುರುತಿಸಲಾಯಿತು. ದಿಃ- 13-01-2020 ರಂದು ಎಸ್ ಎ ಎಸ್ ವಕೀಲರ ಮೂಲಕ ತಹಶೀಲ್ದಾರ ಕೊಪ್ಪಳ ಇವರಿಗೆ ಕೊಟ್ಟ ನೊಟಿಸ ಪ್ರತಿ ನಿಪಿ 5 ಎಂದು ಗುರುತಿಸಲಾಯಿತು. ದಿಃ- 31-01-2020 ರಂದು ತಹಶೀಲ್ದಾರರವರು ಕೊಟ್ಟ ಉತ್ತರದ ಪ್ರತಿ ನಿಪಿ 6 ಎಂದು ಗುರುತಿಸಲಾಯಿತು. ದಿಃ- 13-02-2020 ರಂದು ತಹಶೀಲ್ದಾರ ಕೊಪ್ಪಳ ಇವರಿಗೆ ಎಸ್ ಎ ಎಸ್ ವಕೀಲರ ಮೂಲಕ ಕೊಟ್ಟ ನೊಟಸ ಪ್ರತಿ ನಿಪಿ 7 ಎಂದು, ದಿಃ- 17-02-2020 ರಂದು ತಹಶೀಲ್ದಾರ ಕೊಪ್ಪ ಇವರಿಗೆ ಕೊಟ್ಟ ನೊಟಿಸ ಪ್ರತಿ ನಿಪಿ 8 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಎ ಎಸ್ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರ ಅಲ್ಲಾ. ಸಾಕ್ಷಿದಾರನಿದ್ದೇನೆ. ನಿಪಿ 3 ರಿಂದ 8 ಎಂದು ಗುರುತಿಸಲಾದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಅವುಗಳನ್ನು ಪೊಲೀಸ್ ಠಾಣೆಗೆ ಕೊಟ್ಟಿದ್ದೇನೆ. ಈ ಎಲ್ಲಾ ದಾಖಲಾತಿಗಳನ್ನು ತಹಶೀಲ್ದಾರ ಕಚೇರಿಯಿಂದ ನಾನೇ ತೆಗೆದುಕೊಂಡಿದ್ದೇನೆ. ನಾನು ಅರ್ಜಿ ಕೊಟ್ಟು ಪಡೆದಿದ್ದೇನೆ. ಆ ಅರ್ಜಿ ನಕಲು ನನ್ನಲ್ಲಿ ಇದೆ, ಅದನ್ನು ಕೊರ್ಟಗೆ ಹಾಜರುಪಡಿಸಿಲ್ಲ.

2. 2020 ರಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೆ. ಸುಭಾಷ್ ಎಂಬ ಪೊಲೀಸ್ ಬಂದಿದ್ದ ಅಲ್ಲಿದ್ದ ಪೊಲೀಸ್ ಅಧಿಕಾರಿ ಯಾರು ಅಂತಾ ಗೊತ್ತಿಲ್ಲ. ನಿಮ್ಮ ದಾಖಲೆಗಳನ್ನು ಶರಣಪ್ಪ ತಿದ್ದುಪಡೆ ಮಾಡಿದ್ದಾನೆ ಎಂದು ತಹಶೀಲ್ದಾರವರು ದೂರು ಕೊಟ್ಟಿದ್ದಾರೆ ಎಂದರು, ನಾನು ಅದಕ್ಕೆ ನಮ್ಮಲ್ಲಿ ಇದ್ದ

ದಾಖಲಾತಿಗಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟೆ. ನಮ್ಮ ಕಾಗದ ಪತ್ರಗಳಲ್ಲಿ ನಮ್ಮ ಹೆಸರು ಮತ್ತು ಅಡ್ರಸ್ ಇತ್ತು,

3. ನರಸಪ್ಪ ಯಂಕಪ್ಪ ಯಾವಾಗ ಮರಣ ಹೊಂದಿದರು ಗೊತ್ತಿಲ್ಲ. ವಾಸಪ್ಪ ರಾಮಪ್ಪ ಯಾವಾಗ ಮರಣ ಹೊಂದಿದರು ಗೊತ್ತಿಲ್ಲ. ವಾಸಪ್ಪನ ಕಡೆಯಿಂದ ನಾವು ಖರೀದಿಸಿದ ಜಮೀನು ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ ಇದೆ, ಇದನ್ನು 1993-94 ರಲ್ಲಿ ಖರೀದಿಸಿದ್ದು ಇದೆ. ಖರೀದಿ ಪತ್ರ ಜರಾಕ್ಸ ಪ್ರತಿ ಪೊಲೀಸರಿಗೆ ಕೊಟ್ಟಿದ್ದೇನೆ. ವಾಸಪ್ಪನ ಮಕ್ಕಳ ಹೆಸರಿನಲ್ಲಿ ಯಾವ ಜಮೀನು ಇದೆ ಎಂದು ಗೊತ್ತಿಲ್ಲ. ನರಸಪ್ಪ ತಂದೆ ಯಂಕಪ್ಪನ ಹೆಸರಿಗೆ ಸರ್ವೇ ನಂ. 271/1 ಹೊಸ ನಂ. 271/3 ಇದೆ. ನರಸಪ್ಪನ ಮಕ್ಕಳ ಹೆಸರಿನ ಪಹಣಿ ಗೊತ್ತಿಲ್ಲ.

4. ನರಸಪ್ಪ ಮರಣ ಹೊಂದಿದ ಆತನ ಹೆಸರಿನಲ್ಲಿ ಹೊಲ ಇತ್ತು, ಆತನಿಗೆ 5 ಗಂಡು 2 ಹೆಣ್ಣು ಮಕ್ಕಳು, 5 ಜನ ಗಂಡು ಮಕ್ಕಳು 2003 ರಲ್ಲಿ ಹೊಲ ಮಾರಲು ಹೋದಾಗ ಆಗ ಅವರ ಸರ್ವೇ ನಂ. 271/1 ಹೊಸ ನಂ. 271/3 ನಮ್ಮ ಹೆಸರಿನಲ್ಲಿದೆ ಹಾಗೂ ನಮ್ಮ ಹೊಲದ ಸರ್ವೇ ನಂ. 273/ಎ 1 ಅವರ ಹೆಸರಿನಲ್ಲಿ ಆಗಿದೆ ಅಂತಾ ಗೊತ್ತಾಯಿತು, ಪಹಣಿ ಅದಲು ಬದಲು ನರಸಪ್ಪನ ಮಕ್ಕಳು ಸಹಿ ಮಾಡಿದರು. ಹೆಣ್ಣು ಮಕ್ಕಳು ಮದುವೆ ಮಾಡಿಕೊಂಡು ಹೋಗಿದ್ದರು ಹೀಗಾಗಿ ಅವರು ಬಂದು ಸಹಿ ಮಾಡಿಲ್ಲ.

5. 2004 ರಲ್ಲಿ ನನ್ನ ವಯಸ್ಸು ಸುಮಾರು 17 ರಿಂದ 18 ವರ್ಷ ಇರಬಹುದು, ಈ ಅದಲು ಬದಲು ಕಾರ್ಯ ನನ್ನ ತಂದೆಯ ಉಪಸ್ಥಿತಿಯಲ್ಲಿ ಆಗಿತ್ತು. ಈಗ ನನ್ನ ತಂದೆ ಜೀವಂತ ಇದ್ದಾರೆ. ಅವರ ಕಾಲು ಮುರಿದಿದೆ, ಆರೋಗ್ಯ ಸ್ಥಿತಿ ಸರಿ ಇಲ್ಲ, ಅಡ್ಡಾಡಲು ಆಗುವುದಿಲ್ಲ. ಪೊಲೀಸರು ಕರೆದಿದ್ದರಿಂದ ನಾನು ಪೊಲೀಸ್ ಠಾಣೆಗೆ ಹೋಗಿ ದಾಖಲೆ ಕೊಟ್ಟು ಹೇಳಿಕೆ ಕೊಟ್ಟೆ.

6. ಈ ಜಮಿನು ಸರ್ವೇ ನಂ. 271/3 ಕ್ಷೇತ್ರ 5 ಎಕರೆ ಸಂಬಂಧದಲ್ಲಿ ಇದೇ ಆರೋಪಿ ಶರಣಪ್ಪ ಗಾಳಿ, ಅವರ ತಾಯಿ, ಅವರ ತಮ್ಮ, ಇಬ್ಬರು ಅಕ್ಕತಂಗಿಯರು ಸೇರಿ ನನ್ನ ತಂದೆ ಮತ್ತು ನನ್ನ ಮೇಲೆ ಓ ಎಸ್ ನಂ. 59/2020 ದಾಖಲಿಸಿದ್ದಾರೆ ಎಂದರೆ ಸರಿ. ನಾನು ಈ ಮೊದಲ ಮುಖ್ಯ ವಿಚಾರಣೆ ಕೊಟ್ಟ ದಿನಾಂಕ ನೆನಪಿಲ್ಲ, ಆದರೆ ಸಾಕ್ಷಿ ಕೊಟ್ಟಿದ್ದು ಸತ್ಯ.

7. ಈ ಆರೋಪಿ ಎಸಿಯವರ ಮುಂದೆ ಅಪೀಲು ಹಾಕಿ ವಾಪಸ್ಸು ಪಡೆದ ದಿನಾಂಕ ನೆನಪಿಲ್ಲ. ಆದರೆ ಪಾರ್ಟೀ ಸವಾಲು ಮಾಡುತ್ತಿರುವ ಎಸ್ ಎ ಎಸ್ ವಕೀಲರ ಮೂಲಕ ಹಾಜರಾಗಿದ್ದ, ಅಲ್ಲಿ ನಮ್ಮ ಹೆಸರಿಗೆ ಆದ ಮುಟೇಶನ್ ರದ್ದು ಆಯಿತು, ನಾನು ಡಿಸಿ ಮುಂದೆ ಹೋದೆ, ಅಲ್ಲಿ ಎಸಿಯವರ ಆದೇಶ ರದ್ದಾಯಿತು, ಶರಣಪ್ಪ ಹನಮಂತಪ್ಪ ಗಾಳಿ ಇವರಿಗೆ ಸರ್ವೇ ನಂ. 271/3 ಕ್ಷೇತ್ರ 5 ಎಕರೆ ಈ

ಜಮೀನು ಸಂಬಂಧ ಇಲ್ಲ ಎಂದು ಆದೇಶ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಜಿಲ್ಲಾಧಿಕಾರಿ ಆದೇಶ ಪ್ರಶ್ನಿಸಿ ಈ ಆರೋಪಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಅಪಿಲು ಹಾಕಿದ್ದ ಎಂದರೆ ಸರಿ. ಸದರಿ ಅಪೀಲು ವಜಾ ಆಗಿ ಈ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಓ ಎಸ್ ನಂ. 59/2020 ನಲ್ಲಿ ವಿವಾದ ಬಗೆಹರಿಸಿಕೊಳ್ಳುವಂತೆ ಆದೇಶ ನೀಡಿದ್ದಾರೆ ಎನ್ನುತ್ತಾರೆ.

8. ಸರ್ವೇ ನಂ. 271/3 ತನ್ನ ಹೆಸರಿಗೆ ದಾಖಲಿಸಿಕೊಳ್ಳಲು 2017 ರಲ್ಲಿ 2 ಅರ್ಜಿ ಹಾಕಿದ್ದ. ಆತ ಹಾಕಿದ 2 ಅರ್ಜಿ ಪ್ರತಿಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಒಂದು ಅರ್ಜಿಗೆ ಸಂಬಂದಪಟ್ಟಂತೆ ಆತನಿಗೆ ತಹಶೀಲ್ದಾರವರು ನಿಮಗೆ ಈ ಸರ್ವೇ ನಂಬರ್ ನಲ್ಲಿ ಯಾವುದೇ ಜಮೀನು ಉಳಿದಿಲ್ಲಾ ಎಂದು 2017 ರಲ್ಲಿ ಹಿಂಬರಹ ಕೊಟ್ಟಿದ್ದಾರೆ. ಇನ್ನೊಂದು ಅರ್ಜಿಗೆ ಸಂಬಂದಪಟ್ಟಂತೆ, ತಹಶೀಲ್ದಾರವರು ಆದೇಶ ಮಾಡಿ ನರಸಪ್ಪ ತಂದೆ ಯಂಕಪ್ಪ ಕರಮುಡಿ ಇದ್ದದನ್ನು ನರಸಪ್ಪ ತಂದೆ ಯಂಕಪ್ಪ ಗಾಳಿ ಎಂದು ತಿದ್ದುಪಡೆ ಮಾಡಿ ತಪ್ಪು ಮಾಡಿ ಇನ್ನೊಬ್ಬರ ಆಸ್ತಿ ಕಬಳಿಸಲು ಹೊರಟಿದ್ದಾರೆ ಎಂದು ಆದೇಶ ಮಾಡಿದರು ಎನ್ನುತ್ತಾರೆ.

9. ನನ್ನ ಒತ್ತಾಯದ ಮೇಲೆ ಕ್ರಿಮಿನಲ್ ಪ್ರಕರಣ ನಡೆಯುತ್ತಿದೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿ ಕೊಟ್ಟಿಲ್ಲ, ಆದ್ದರಿಂದ ಒತ್ತಾಯ ಮಾಡುವ ಪ್ರಶ್ನೆ ಬರುವುದಿಲ್ಲ ಎನ್ನುತ್ತಾರೆ. ತಹಶೀಲ್ದಾರ ಆದೇಶದ ಪ್ರಕಾರ ಅದಲು ಬದಲು ಮಾಡಿದ್ದೇವೆ, ಅದು ನೊಂದಾಯಿತ ದಾಖಲೆ ಅಲ್ಲಾ. ತಹಶೀಲ್ದಾರವರೆ ನಮ್ಮ ಅರ್ಜಿ ಆಧಾರಿಸಿ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ಈ ಪ್ರಕರಣದಲ್ಲಿ ಕಾಣಿಸಿದ ಆಸ್ತಿ ನಮ್ಮದಲ್ಲಾ ಎಂದರೆ ಸರಿಯಲ್ಲ. ನಾವು ಖರೀದಿ ಮಾಡಿದ್ದು 4 ಎಕರೆ ಎನ್ನುವುದು ಸರಿ, ಆದರೆ ಅದಲು ಬದಲು ಆದಾಗ 5 ಎಕರೆ ಸರ್ವೇ ನಂಬರ್ ನಮಗೆ ಬಂತು, 4 ಎಕರೆ ಸರ್ವೇ ನಂಬರ್ ಅವರಿಗೆ ಹೋಯಿತು, ಚಕ್ಕಬಂದಿ ಮಾತ್ರ ಬೇರೆ ಆಗಿಲ್ಲ, ಆದ್ದರಿಂದ ನಮ್ಮದು 5 ಎಕರೆ ಎಂದು ಹೇಳುತ್ತಿದ್ದೇನೆ. ಈಗ ತೋರಿಸಿದ ದಾಖಲೆ ನರಸಪ್ಪನ ಮಕ್ಕಳು ಮತ್ತು ನಾವು ಕೂಡಿ ಅದಲು ಬದಲು ಮಾಡಿ ಒಪ್ಪಂದ ಮಾಡಿಕೊಂಡ ದಾಖಲೆಯ ಪ್ರತಿ ಇರುತ್ತದೆ ಅದನ್ನು ದಿಃ- 28-12-2001 ರಂದು ಮಾಡಲಾಗಿದೆ, ಅದರ ಮೇಲೆ ನನ್ನ ತಂದೆಯ ಸಹಿ ಮಾಡಿದ್ದಾರೆ ಎನ್ನುತ್ತಾರೆ, ಸದರಿ ದಾಖಲೆಯನ್ನು ನಿಡಿ 1 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

10. ಇದೇ ವಿಷಯ 2004 ರ ದಾಖಲೆಯಲ್ಲಿ ಬರೆಯಿಸಿದ್ದೇವೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆ ನಾವು ಮಾಡಿದ್ದು ಎಂದರೆ ಸರಿಯಲ್ಲ. ತಹಶೀಲ್ದಾರ ಮಾಡಿದ್ದಾರೆ. ಶರಪ್ಪ ಸಿವಿಲ್ ಪ್ರಕರಣದಲ್ಲಿ ಹಿಂದೆ ಸರಿಯಲಿ ಎಂದು ಕೊಂಡು ತಹಶೀಲ್ದಾರ ಜೊತೆ ಸೇರಿ ಇದೊಂದು ಸುಳ್ಳು ಕೇಸು ಮಾಡಿದೆವು ಎಂದರೆ ಸರಿಯಲ್ಲ. ಶರಣಪ್ಪನ ತಮ್ಮ ನನ್ನೊಂದಿಗೆ ಸಾಕಷ್ಟು ಕ್ಲೋಸ್

ಎಂದರೆ ಸರಿಯಲ್ಲ. ಆತನ ತಮ್ಮ ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆ: ಇಲ್ಲ</u>**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**